



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಸರ್ವ ಪ್ರಶಂಸೆಗಳು ಅಲ್ಲಾಹನಿಗೆ ಮೀಸಲು. ಅವನು ಭೂಮಿ-ಆಕಾಶಗಳ ಸೃಷ್ಟಿಕರ್ತನು. ಎರಡೆರಡು, ಮೂರು ಮೂರು ಹಾಗೂ ನಾಲ್ಕು ನಾಲ್ಕು ರೆಕ್ಕೆಗಳಿರುವ ದೇವಚರರನ್ನು ದೂತರನ್ನಾಗಿ ನೇಮಿಸುವವನು. ಅವನು ತನ್ನ ಸೃಷ್ಟಿಯ ರಚನೆಯಲ್ಲಿ ತಾನಿಚ್ಛಿಸುವಂತೆ ವೃದ್ಧಿಯನ್ನು ಮಾಡುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಪ್ರತಿಯೊಂದು ಕಾರ್ಯಕ್ಕೂ ಸಾಮರ್ಥ್ಯವುಳ್ಳವನು.

اَلْحَمْدُ لِلّٰهِ فَاطِرِ السَّمٰوٰتِ وَالْاَرْضِ
جَاعِلِ الْمَلٰٓئِكَةِ رُسُلًا اُولِيْٓ اَجْنِحَةٍ
مَّثْنٰى وَثُلٰثَ وَرُبٰعَ ؕ يَزِيْدُ فِى
الْخَلْقِ مَا يَشَآءُ ؕ اِنَّ اللّٰهَ عَلٰى كُلِّ شَىْءٍ قَدِيْرٌ ①

2. ಅಲ್ಲಾಹನು ಜನರಿಗಾಗಿ ಯಾವ ಕೃಪಾದ್ವಾರವನ್ನು ತೆರೆದರೂ ಅವನನ್ನು ಯಾರೂ ತಡೆಯುವವನಿಲ್ಲ. ಅವನು ಯಾವುದನ್ನು ಮುಚ್ಚಿಬಿಟ್ಟನೋ ಅವನ ಹೊರತು ಇನ್ನಾರೂ ಅದನ್ನು ತೆರೆಯುವವನಿಲ್ಲ. ಅವನು ಅತ್ಯಂತ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

مَا يَفْتَحِ اللّٰهُ لِلنَّاسِ مِنْ رَّحْمَةٍ فَلَا
مُمْسِكَ لَهَا ۚ وَمَا يُمْسِكْ ۙ فَلَا مُرْسِلَ
لَهٗ مِنْۢ بَعْدِهٖ ؕ وَهُوَ الْعَزِيْزُ الْحَكِيْمُ ②

3. ಜನರೇ, ನಿಮ್ಮ ಮೇಲಿರುವ ಅಲ್ಲಾಹನ ಅನುಗ್ರಹಗಳನ್ನು ಸ್ಮರಿಸಿರಿ. ಅಲ್ಲಾಹನ ಹೊರತು ಆಕಾಶ ಮತ್ತು ಭೂಮಿಯಿಂದ ನಿಮಗೆ ಆಹಾರ ನೀಡುವಂತಹ ಸೃಷ್ಟಿಕರ್ತನಾರಾದರೂ ಇರುವನೇ? ಅವನ ಹೊರತು ಇನ್ನಾವ ಆರಾಧ್ಯನೂ ಇಲ್ಲ. ನೀವು ಮೋಸ ಹೋಗುತ್ತಿರುವುದಾದರೂ ಎಲ್ಲಿಂದ?

يٰٓاَيُّهَا النَّاسُ اذْكُرُوْا نِعْمَتَ اللّٰهِ عَلَيْكُمْ ؕ
هَلْ مِنْ خَالِقٍ غَيْرُ اللّٰهِ يَرْزُقُكُمْ مِّنَ
السَّمَآءِ وَالْاَرْضِ ؕ لَآ اِلٰهَ اِلَّا هُوَ ۖ
فَاَنّٰى تُؤْفَكُوْنَ ③

4. ಈಗ (ಪೈಗಂಬರರೇ,) ಇವರು ನಿಮ್ಮನ್ನು ಸುಳ್ಳಾಗಿಸುತ್ತಿದ್ದರೆ, (ಇದೇನೂ ಹೊಸತಲ್ಲ.) ನಿಮಗಿಂತ ಮುಂಚೆಯೂ ಅನೇಕ ಸಂದೇಶವಾಹಕರು ಸುಳ್ಳಾಗಿಸಲ್ಪಟ್ಟಿದ್ದಾರೆ. ಸಕಲ ವ್ಯವಹಾರಗಳೂ ಅಂತಿಮವಾಗಿ ಅಲ್ಲಾಹನ ಕಡೆಗೇ ಮರಳಲಿವೆ.

وَاِنْ يُّكَذِّبُوْكَ فَقَدْ كُذِّبَتْ رُسُلٌ
مِّنْ قَبْلِكَ ؕ وَاِلَى اللّٰهِ تُرْجَعُ الْاُمُوْرُ ④

5. ಜನರೇ, ಅಲ್ಲಾಹನ ವಾಗ್ದಾನವು ನಿಶ್ಚಯವಾಗಿಯೂ ಪರಮ ಸತ್ಯವಾಗಿದೆ. ಆದುದರಿಂದ ಲೌಕಿಕ ಜೀವನವು ನಿಮ್ಮನ್ನು ವಂಚಿಸದಿರಲಿ ಮತ್ತು ಆ ಮಹಾ ವಂಚಕನು ಅಲ್ಲಾಹನ ವಿಷಯದಲ್ಲಿ ನಿಮ್ಮನ್ನು ವಂಚಿಸದಿರಲಿ.

يَٰٓأَيُّهَا ٱلنَّاسُ إِنَّ وَعْدَ ٱللَّهِ حَقٌّ ۖ فَلَا تَغُرَّنَّكُمُ ٱلْحَيَوٰةُ ٱلدُّنْيَا ۖ وَلَا يَغُرَّنَّكُم بِٱللَّهِ ٱلْغَرُورُ ﴿٥﴾

6. ವಾಸ್ತವದಲ್ಲಿ ಶೈತಾನನು ನಿಮ್ಮ ಶತ್ರುವಾಗಿದ್ದಾನೆ. ಆದುದರಿಂದ ನೀವೂ ಅವನನ್ನು ನಿಮ್ಮ ಶತ್ರುವೆಂದೇ ತಿಳಿಯಿರಿ. ಅವನು ತನ್ನ ಅನುಯಾಯಿಗಳನ್ನು ಅವರು ನರಕವಾಸಿಗಳಲ್ಲಾಗಲೆಂದೇ ತನ್ನ ಮಾರ್ಗದ ಕಡೆಗೆ ಕರೆಯುತ್ತಿದ್ದಾನೆ.

إِنَّ ٱلشَّيْطَٰنَ لَكُمْ عَدُوٌّ فَٱتَّخِذُوهُ عَدُوًّا ۚ إِنَّمَا يَدْعُوا۟ حِزْبَهُۥ لِيَكُونُوا۟ مِنْ أَصْحَٰبِ ٱلسَّعِيرِ ﴿٦﴾

7. ಯಾರು ಸತ್ಯವನ್ನು ನಿಷೇಧಿಸುವರೋ ಅವರಿಗೆ ಘೋರ ಯಾತನೆ ಕಾದಿದೆ. ಸತ್ಯವಿಶ್ವಾಸವನ್ನು ಸ್ವೀಕರಿಸಿ ಸತ್ಕರ್ಮವೆಸಗುವವರಿಗಾಗಿ ಕ್ಷಮೆಯೂ ಮಹಾ ಸತ್ಫಲವೂ ಇದೆ.

ٱلَّذِينَ كَفَرُوا۟ لَهُمْ عَذَابٌ شَدِيدٌ ۖ وَٱلَّذِينَ ءَامَنُوا۟ وَعَمِلُوا۟ ٱلصَّٰلِحَٰتِ لَهُم مَّغْفِرَةٌ وَأَجْرٌ كَبِيرٌ ﴿٧﴾ ع

8. ಯಾರ ಪಾಲಿಗೆ ಅವನ ದುಷ್ಕರ್ಮವು ಮನೋಹರಗೊಳಿಸಲ್ಪಟ್ಟು ಅವನು ಅದನ್ನು ಉತ್ತಮವಾದುದೆಂದು ಗ್ರಹಿಸುತ್ತಾನೋ (ಅವನ ಪಥಭ್ರಷ್ಟತೆಗೆ ಮಿತಿ ಇದೆಯೇ?) ವಾಸ್ತವದಲ್ಲಿ ಅಲ್ಲಾಹನು ತಾನಿಚ್ಛಿಸಿದವರನ್ನು ಪಥಭ್ರಷ್ಟಗೊಳಿಸಿ ಬಿಡುತ್ತಾನೆ ಮತ್ತು ತಾನಿಚ್ಛಿಸಿದವರಿಗೆ ಸನ್ಮಾರ್ಗ ತೋರಿಸುತ್ತಾನೆ. ಆದುದರಿಂದ (ಪೈಗಂಬರರೇ) ನಿಮ್ಮ ಜೀವನವು ಇವರಿಗಾಗಿ ಖೇದ ಹಾಗೂ ಕಳವಳಗಳಲ್ಲಿ ಕೊರಗದಿ ರಲಿ. ನಿಶ್ಚಯವಾಗಿಯೂ ಇವರು ಮಾಡುತ್ತಿರುವುದನ್ನು ಅಲ್ಲಾಹನು ಚೆನ್ನಾಗಿ ಅರಿಯುತ್ತಾನೆ.

أَفَمَن زُيِّنَ لَهُۥ سُوٓءُ عَمَلِهِۦ فَرَءَاهُ حَسَنًا ۖ فَإِنَّ ٱللَّهَ يُضِلُّ مَن يَشَآءُ وَيَهْدِى مَن يَشَآءُ ۖ فَلَا تَذْهَبْ نَفْسُكَ عَلَيْهِمْ حَسَرَٰتٍ ۚ إِنَّ ٱللَّهَ عَلِيمٌۢ بِمَا يَصْنَعُونَ ﴿٨﴾

9. ಅಲ್ಲಾಹನೇ ಮಾರುತಗಳನ್ನು ಕಳುಹಿಸುತ್ತಾನೆ, ಅನಂತರ ಅವುಗಳು ಮೋಡವನ್ನೆಬ್ಬಿಸುತ್ತವೆ, ತರುವಾಯ ನಾವು ಅದನ್ನು ಒಂದು ಬಂಜರು ಪ್ರದೇಶದ ಕಡೆಗೆ ಒಯ್ಯುತ್ತೇವೆ ಮತ್ತು ಅದರ ಮೂಲಕ ಸತ್ತು ಬಿದ್ದಿದ್ದ ಅದೇ ಭೂಮಿಯನ್ನು ಜೀವಂತಗೊಳಿಸುತ್ತೇವೆ. ಸತ್ತವರ ಪುನರುಜ್ಜೀವನವೂ ಹೀಗೆಯೇ ಆಗುವುದು.

وَٱللَّهُ ٱلَّذِىٓ أَرْسَلَ ٱلرِّيَٰحَ فَتُثِيرُ سَحَابًا فَسُقْنَٰهُ إِلَىٰ بَلَدٍ مَّيِّتٍ فَأَحْيَيْنَا بِهِ ٱلْأَرْضَ بَعْدَ مَوْتِهَا ۚ كَذَٰلِكَ ٱلنُّشُورُ ﴿٩﴾

10. ಗೌರವವನ್ನು ಇಚ್ಛಿಸುವವನು ಗೌರವವು ಸರ್ವ ಸಂಪೂರ್ಣವಾಗಿ ಅಲ್ಲಾಹನದೆಂಬುದನ್ನು ತಿಳಿದಿರಬೇಕು. ಅವನಲ್ಲಿಗೆ ಮೇಲೇರುವಂತಹ ವಸ್ತು 'ಪರಿಶುದ್ಧವಚನ' ಮಾತ್ರ. ಸತ್ಕರ್ಮವು ಅದನ್ನು ಮೇಲಕ್ಕೇರಿಸುತ್ತದೆ. ಇನ್ನು ದುಷ್ಟ ಕುತಂತ್ರಗಳನ್ನೆಸಗುವವರ ವಿಷಯ- ಅವರಿಗಾಗಿ ಕಠಿಣ ಯಾತನೆ ಇದೆ. ಅವರ ಕುತಂತ್ರವು ಸ್ವತಃ ನಾಶವಾಗಲಿದೆ.

مَن كَانَ يُرِيدُ ٱلْعِزَّةَ فَلِلَّهِ ٱلْعِزَّةُ جَمِيعًا ۚ إِلَيْهِ يَصْعَدُ ٱلْكَلِمُ ٱلطَّيِّبُ وَٱلْعَمَلُ ٱلصَّٰلِحُ يَرْفَعُهُۥ ۚ وَٱلَّذِينَ يَمْكُرُونَ ٱلسَّيِّـَٔاتِ لَهُمْ عَذَابٌ شَدِيدٌ ۖ وَمَكْرُ أُو۟لَٰٓئِكَ هُوَ يَبُورُ ﴿١٠﴾

11. ಅಲ್ಲಾಹನು ನಿಮ್ಮನ್ನು ಮಣ್ಣಿನಿಂದ ಸೃಷ್ಟಿಸಿದನು. ತರುವಾಯ ವೀರ್ಯದಿಂದ, ಅನಂತರ ನಿಮ್ಮನ್ನು (ಗಂಡು-ಹೆಣ್ಣೆಂಬ) ಜೊತೆಗಳಾಗಿ ಮಾಡಿದನು. ಅಲ್ಲಾಹನಿಗೆ ಅರಿವಿಲ್ಲದೆ ಯಾವ ಸ್ತ್ರೀಯೂ ಗರ್ಭವತಿಯಾಗುವುದೂ ಇಲ್ಲ ಪ್ರಸವಿಸುವುದೂ ಇಲ್ಲ. ಯಾವುದೇ ವೃದ್ಧನು ದೀರ್ಘಾಯುಸ್ಸನ್ನು ಪಡೆಯುವುದಾಗಲಿ, ಯಾರದಾದರೂ ಆಯುಷ್ಯದಲ್ಲಿ ತುಸು ಕಡಿತವಾಗುವುದಾಗಲಿ ಇವೆಲ್ಲವೂ ಒಂದು ಗ್ರಂಥದಲ್ಲಿ ಲಿಖಿತವಾಗಿರದೆ ಸಂಭವಿಸುವುದಿಲ್ಲ. ಇದು ಅಲ್ಲಾಹನಿಗೆ ಅತಿ ಸುಲಭವಾದ ಕೆಲಸ.

وَاللّٰهُ خَلَقَكُمْ مِّنْ تُرَابٍ ثُمَّ مِنْ نُّطْفَةٍ
ثُمَّ جَعَلَكُمْ اَزْوَاجًا ؕ وَمَا تَحْمِلُ مِنْ
اُنْثٰى وَلَا تَضَعُ اِلَّا بِعِلْمِهٖ ؕ وَمَا يُعَمَّرُ
مِنْ مُّعَمَّرٍ وَّلَا يُنْقَصُ مِنْ عُمُرِهٖۤ
اِلَّا فِیْ كِتٰبٍ ؕ اِنَّ ذٰلِكَ عَلَى اللّٰهِ يَسِيْرٌ ﴿۱۱﴾

12. ನೀರಿನ ಎರಡು ಸಂಗ್ರಹಗಳು ಸಮವಾಗಿಲ್ಲ. ಒಂದು ಸಿಹಿಯಾಗಿದ್ದು ಬಾಯಾರಿಕೆಯನ್ನು ನೀಗಿಸುವಂತಹದ್ದೂ ಕುಡಿಯಲು ರುಚಿಕರವೂ ಆಗಿದೆ, ಇನ್ನೊಂದು ಗಂಟಲು ಸುಲಿದು ಹೋಗುವಷ್ಟು ಉಪ್ಪಾಗಿದೆ. ಆದರೆ ನೀವು ಇವೆರಡರಿಂದಲೂ ತಾಜಾ ಮಾಂಸವನ್ನು ಪಡೆಯುತ್ತೀರಿ. ಧರಿಸಲು ಅಲಂಕಾರ ಸಾಧನಗಳನ್ನು ಹೊರ ತೆಗೆಯುತ್ತೀರಿ ಮತ್ತು ಅದೇ ನೀರಿನಲ್ಲಿ ನಾವೆಗಳು ಅದರ ಎದೆಯನ್ನು ಸೀಳುತ್ತಾ ಸಾಗುತ್ತಿರುವುದನ್ನು ನೀವು ನೋಡುತ್ತೀರಿ. ಇವೆಲ್ಲ ನೀವು ಅಲ್ಲಾಹನ ಅನುಗ್ರಹವನ್ನರಸಲಿಕ್ಕಾಗಿಯೂ ಅವನಿಗೆ ಕೃತಜ್ಞರಾಗಲಿಕ್ಕಾಗಿಯೂ ಆಗಿದೆ.

وَمَا يَسْتَوِی الْبَحْرٰنِ ۖۗ هٰذَا عَذْبٌ
فُرَاتٌ سَآئِغٌ شَرَابُهٗ وَهٰذَا مِلْحٌ
اُجَاجٌ ؕ وَمِنْ كُلٍّ تَاْكُلُوْنَ لَحْمًا
طَرِيًّا وَّتَسْتَخْرِجُوْنَ حِلْيَةً تَلْبَسُوْنَهَا ۚ
وَتَرَى الْفُلْكَ فِيْهِ مَوَاخِرَ لِتَبْتَغُوْا
مِنْ فَضْلِهٖ وَلَعَلَّكُمْ تَشْكُرُوْنَ ﴿۱۲﴾

13. ಅವನು ಹಗಲಿನೊಳಗೆ ರಾತ್ರಿಯನ್ನೂ ರಾತ್ರಿಯೊಳಗೆ ಹಗಲನ್ನೂ ಪೋಣಿಸುತ್ತ ತರುತ್ತಾನೆ. ಸೂರ್ಯ ಚಂದ್ರರನ್ನು ಅವನು ನಿಯಂತ್ರಿಸಿ ಟ್ಟಿದ್ದಾನೆ. ಇದೆಲ್ಲವೂ ಒಂದು ನಿಶ್ಚಿತ ಸಮಯದ ವರೆಗೆ ನಡೆಯುತ್ತ ಸಾಗುತ್ತಿದೆ. (ಇವೆಲ್ಲವನ್ನೂ ಮಾಡುತ್ತಿರುವ) ಅಲ್ಲಾಹನೇ ನಿಮ್ಮ ಪ್ರಭು. ಸಾರ್ವಭೌಮತೆ ಅವನದೇ ಆಗಿರುತ್ತದೆ. ಅವನನ್ನು ಬಿಟ್ಟು ನೀವು ಇತರ ಯಾರನ್ನೆಲ್ಲ ಪ್ರಾರ್ಥಿಸುತ್ತೀರೋ ಅವರು ಒಂದು ಹುಲು ಕಡ್ಡಿಯ ಒಡೆಯರೂ ಅಲ್ಲ.

يُوْلِجُ الَّيْلَ فِی النَّهَارِ وَيُوْلِجُ النَّهَارَ
فِی الَّيْلِ ۙ وَسَخَّرَ الشَّمْسَ وَالْقَمَرَ ۖؗ
كُلٌّ يَّجْرِیْ لِاَجَلٍ مُّسَمًّی ؕ ذٰلِكُمُ
اللّٰهُ رَبُّكُمْ لَهُ الْمُلْكُ ؕ وَالَّذِيْنَ تَدْعُوْنَ
مِنْ دُوْنِهٖ مَا يَمْلِكُوْنَ مِنْ قِطْمِيْرٍ ﴿۱۳﴾

14. ನೀವು ಅವರನ್ನು ಪ್ರಾರ್ಥಿಸಿದರೆ ಅವರು ನಿಮ್ಮ ಪ್ರಾರ್ಥನೆಗಳನ್ನು ಕೇಳಲಾರರು ಮತ್ತು ಕೇಳಿದರೂ ಅವುಗಳ ಉತ್ತರವನ್ನು ನಿಮಗೆ ಕೊಡಲಾರರು. ಪುನರುತ್ಥಾನದಿನ ಅವರು ನೀವೆಸಗಿದ ದೇವಸಹಭಾಗಿತ್ವವನ್ನು ನಿರಾಕರಿಸಿ ಬಿಡುವರು. ವಸ್ತುಸ್ಥಿತಿಯ ಇಂತಹ ಸರಿಯಾದ ವಿವರವನ್ನು ನಿಮಗೆ ಓರ್ವ ವಿವರಪೂರ್ಣನಲ್ಲದೆ ಇನ್ನಾರೂ ಕೊಡಲಾರನು.

اِنْ تَدْعُوْهُمْ لَا يَسْمَعُوْا دُعَآءَكُمْ ۚ وَلَوْ
سَمِعُوْا مَا اسْتَجَابُوْا لَكُمْ ؕ وَيَوْمَ الْقِيٰمَةِ
يَكْفُرُوْنَ بِشِرْكِكُمْ ؕ وَلَا يُنَبِّئُكَ
مِثْلُ خَبِيْرٍ ﴿۱۴﴾

الثلثة

15. ಜನರೇ, ನೀವೇ ಅಲ್ಲಾಹನ ಅವಲಂಬಿತರಾಗಿದ್ದೀರಿ ಮತ್ತು ಅಲ್ಲಾಹನು ನಿರಪೇಕ್ಷನೂ ಸ್ತುತ್ಯರ್ಹನೂ ಆಗಿರುತ್ತಾನೆ.

يَـٰٓأَيُّهَا ٱلنَّاسُ أَنتُمُ ٱلْفُقَرَآءُ إِلَى ٱللَّهِ ۖ
وَٱللَّهُ هُوَ ٱلْغَنِىُّ ٱلْحَمِيدُ ﴿١٥﴾

16. ಅವನಿಚ್ಛಿಸಿದರೆ ನಿಮ್ಮನ್ನು ಸರಿಸಿ ಯಾವುದಾದರೊಂದು ಹೊಸ ಸೃಷ್ಟಿಯನ್ನು ನಿಮ್ಮ ಸ್ಥಾನಕ್ಕೆ ತರಬಲ್ಲನು.

إِن يَشَأْ يُذْهِبْكُمْ وَيَأْتِ بِخَلْقٍ جَدِيدٍ ﴿١٦﴾

17. ಹೀಗೆ ಮಾಡುವುದು ಅಲ್ಲಾಹನಿಗೆ ಏನೂ ಕಷ್ಟಸಾಧ್ಯವಲ್ಲ.

وَمَا ذَٰلِكَ عَلَى ٱللَّهِ بِعَزِيزٍ ﴿١٧﴾

18. ಯಾವ ಹೊರೆ ಹೊರುವವನೂ ಇನ್ನೊಬ್ಬನ ಹೊರೆಯನ್ನು ಹೊರಲಾರನು. ಹೊರೆ ಹೊತ್ತ ವ್ಯಕ್ತಿಯು ತನ್ನ ಹೊರೆಯನ್ನು ಹೊರಲು ಕೂಗುವಾಗ, ಅವನ ನಿಕಟ ಬಂಧುವೇ ಆಗಿದ್ದರೂ ಅವನ ಹೊರೆಯ ಅಲ್ಪಾಂಶವನ್ನು ಕೂಡಾ ಹಂಚಿಕೊಳ್ಳಲು ಬರಲಾರನು. (ಪೈಗಂಬರರೇ,) ಪರೋಕ್ಷವಾಗಿ ತಮ್ಮ ಪ್ರಭುವನ್ನು ಭಯಪಡುವವರಿಗೆ ಮತ್ತು ನಮಾಝ್ ಸಂಸ್ಥಾಪಿಸುವವರಿಗೆ ಮಾತ್ರ ನೀವು ಎಚ್ಚರಿಕೆ ಕೊಡಬಲ್ಲಿರಿ. ಆತ್ಮಸಂಸ್ಕರಣೆ ಮಾಡಿಕೊಳ್ಳುವವನು ತನ್ನ ಹಿತಕ್ಕಾಗಿಯೇ ಮಾಡಿಕೊಳ್ಳುತ್ತಾನೆ. ಎಲ್ಲರಿಗೂ ಅಲ್ಲಾಹನ ಕಡೆಗೇ ಮರಳಲಿಕ್ಕಿದೆ.

وَلَا تَزِرُ وَازِرَةٌ وِزْرَ أُخْرَىٰ ۚ وَإِن
تَدْعُ مُثْقَلَةٌ إِلَىٰ حِمْلِهَا لَا يُحْمَلْ مِنْهُ
شَىْءٌ وَلَوْ كَانَ ذَا قُرْبَىٰٓ ۗ إِنَّمَا تُنذِرُ
ٱلَّذِينَ يَخْشَوْنَ رَبَّهُم بِٱلْغَيْبِ وَأَقَامُوا۟
ٱلصَّلَوٰةَ ۚ وَمَن تَزَكَّىٰ فَإِنَّمَا يَتَزَكَّىٰ
لِنَفْسِهِۦ ۚ وَإِلَى ٱللَّهِ ٱلْمَصِيرُ ﴿١٨﴾

19. ಕುರುಡನೂ ಕಣ್ಣುಳ್ಳವನೂ ಸಮಾನರಲ್ಲ-

وَمَا يَسْتَوِى ٱلْأَعْمَىٰ وَٱلْبَصِيرُ ﴿١٩﴾

20. ಅಂಧಕಾರಗಳೂ ಪ್ರಕಾಶವೂ ಸಮಾನವಲ್ಲ-

وَلَا ٱلظُّلُمَـٰتُ وَلَا ٱلنُّورُ ﴿٢٠﴾

21. ತಂಪಾದ ನೆರಳೂ ಬಿಸಿಲ ತಾಪವೂ ಸರಿಸಮಾನವಲ್ಲ.

وَلَا ٱلظِّلُّ وَلَا ٱلْحَرُورُ ﴿٢١﴾

22. ಜೀವಂತರೂ ಮೃತರೂ ಸಮಾನರಲ್ಲ. ಅಲ್ಲಾಹನು ತಾನಿಚ್ಛಿಸಿದವರಿಗೆ ಕೇಳಿಸುತ್ತಾನೆ. ಆದರೆ (ಪೈಗಂಬರರೇ,) ಸಮಾಧಿಗಳಲ್ಲಿ ದಫನರಾಗಿರುವವರಿಗೆ ನೀವು ಕೇಳಿಸಲಾರಿರಿ.[1]

وَمَا يَسْتَوِى ٱلْأَحْيَآءُ وَلَا ٱلْأَمْوَٰتُ ۚ
إِنَّ ٱللَّهَ يُسْمِعُ مَن يَشَآءُ ۖ وَمَآ أَنتَ
بِمُسْمِعٍ مَّن فِى ٱلْقُبُورِ ﴿٢٢﴾

23. ನೀವು ಕೇವಲ ಓರ್ವ ಎಚ್ಚರಿಕೆ ಕೊಡುವವರಾಗಿರುತ್ತೀರಿ.

إِنْ أَنتَ إِلَّا نَذِيرٌ ﴿٢٣﴾

24. ನಾವು ನಿಮ್ಮನ್ನು ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರಾಗಿ ಸತ್ಯಸಹಿತ ಕಳುಹಿಸಿರುತ್ತೇವೆ. ಎಚ್ಚರಿಕೆ ಕೊಡುವವರಾರೂ ಬಂದಿರದಂತಹ ಸಮುದಾಯವೊಂದೂ ಗತಿಸಿಲ್ಲ.

إِنَّآ أَرْسَلْنَـٰكَ بِٱلْحَقِّ بَشِيرًا وَنَذِيرًا ۚ
وَإِن مِّنْ أُمَّةٍ إِلَّا خَلَا فِيهَا نَذِيرٌ ﴿٢٤﴾

1. ಅರ್ಥಾತ್- ಅಲ್ಲಾಹನ ಇಚ್ಛೆಯ ವಿಷಯ ಬೇರೆ. ಅವನು ಬಯಸಿದರೆ ಕಲ್ಲುಗಳಿಗೂ ಶ್ರವಣಶಕ್ತಿಯನ್ನು ದಯಪಾಲಿಸಬಹುದು. ಆದರೆ ಆತ್ಮಸಾಕ್ಷಿಯನ್ನು ಹೃದಯದಲ್ಲಿ ದಫನ ಮಾಡಿಕೊಂಡವರ ಮನಸ್ಸಿಗೆ ತಮ್ಮ ಮಾತುಗಳನ್ನು ಇಳಿಸುವುದು ಪ್ರವಾದಿವರ್ಯರಿಗೆ(ಸ) ಸಾಧ್ಯವಾದ ಕೆಲಸವಲ್ಲ. ಅಂತೆಯೇ ಕೇಳಲೊಲ್ಲದ ಕಿವುಡು ಕಿವಿಯುಳ್ಳವರಿಗೆ ಸತ್ಯದ ಮಾತನ್ನು ತಲಪಿಸುವುದು ಅವರಿಂದ ಸಾಧ್ಯವಿಲ್ಲ. ಉತ್ತಮ ಮಾತಿಗೆ ಕಿವಿಗೊಡಲು ಸಿದ್ಧರಾಗುವ ಜನರಿಗೆ ಮಾತ್ರ ಅವರು ಕೇಳಿಸಬಲ್ಲರು.

25. ಇದೀಗ ಇವರು ನಿಮ್ಮನ್ನು ಸುಳ್ಳಾಗಿಸುತ್ತಾರಾದರೆ ಇವರಿಗಿಂತ ಮುಂಚೆ ಗತಿಸಿದವರೂ ಸುಳ್ಳಾಗಿಸಿದ್ದರು. ಅವರ ಸಂದೇಶವಾಹಕರು ಅವರ ಬಳಿಗೆ ಸುಸ್ಪಷ್ಟ ಆಧಾರಗಳನ್ನು, ಕಿರುಗ್ರಂಥಗಳನ್ನು ಮತ್ತು ಸ್ಪಷ್ಟ ಮಾರ್ಗದರ್ಶನಗಳನ್ನೀಯುವ ಗ್ರಂಥವನ್ನು ತಂದಿದ್ದರು.

وَاِنْ يُّكَذِّبُوْكَ فَقَدْ كَذَّبَ الَّذِيْنَ مِنْ
قَبْلِهِمْ جَآءَتْهُمْ رُسُلُهُمْ بِالْبَيِّنٰتِ
وَبِالزُّبُرِ وَبِالْكِتٰبِ الْمُنِيْرِ ﴿٢٥﴾

26. ಅನಂತರ ನಿರಾಕರಿಸಿದವರನ್ನು ನಾನು ಹಿಡಿದು ಬಿಟ್ಟೆನು. ನನ್ನ ಶಿಕ್ಷೆ ಎಷ್ಟು ಕಠಿಣವಾಗಿತ್ತೆಂದು ನೋಡಿಕೊಳ್ಳಿರಿ.

ثُمَّ اَخَذْتُ الَّذِيْنَ كَفَرُوْا فَكَيْفَ
كَانَ نَكِيْرِ ﴿٢٦﴾ ع ٣ ١٢ ١٥

27. ಅಲ್ಲಾಹನು ಆಕಾಶದಿಂದ ನೀರನ್ನು ಸುರಿಸುವುದನ್ನೂ ಆ ಬಳಿಕ ಅದರ ಮೂಲಕ ನಾವು ನಾನಾ ಬಣ್ಣಗಳಿರುವ ತರತರದ ಫಲ ಗಳನ್ನು ಹೊರ ತರುವುದನ್ನೂ ನೀವು ನೋಡುವುದಿಲ್ಲವೇ? ಪರ್ವತಗಳಲ್ಲೂ ಬಿಳಿ, ಕೆಂಪು, ಕಡುಕಪ್ಪು ಹಾಗೂ ವಿವಿಧ ಬಣ್ಣಗಳ ಬರೆಗಳಿರುತ್ತವೆ.

اَلَمْ تَرَ اَنَّ اللّٰهَ اَنْزَلَ مِنَ السَّمَآءِ مَآءً
فَاَخْرَجْنَا بِهٖ ثَمَرٰتٍ مُّخْتَلِفًا اَلْوَانُهَا ؕ
وَمِنَ الْجِبَالِ جُدَدٌۢ بِيْضٌ وَّحُمْرٌ
مُّخْتَلِفٌ اَلْوَانُهَا وَغَرَابِيْبُ سُوْدٌ ﴿٢٧﴾

28. ಮತ್ತು ಇದೇ ರೀತಿಯಲ್ಲಿ ಮನುಷ್ಯರ, ಪ್ರಾಣಿಗಳ ಮತ್ತು ಜಾನುವಾರುಗಳ ಬಣ್ಣಗಳೂ ವಿಭಿನ್ನವಾಗಿವೆ. ವಾಸ್ತವದಲ್ಲಿ ಅಲ್ಲಾಹನ ದಾಸರಲ್ಲಿ ಜ್ಞಾನವುಳ್ಳವರು ಮಾತ್ರ ಅವನನ್ನು ಭಯಪಡುತ್ತಾರೆ.[2] ನಿಶ್ಚಯವಾಗಿಯೂ ಅಲ್ಲಾಹನು ಪ್ರಬಲನೂ ಕ್ಷಮಾಶೀಲನೂ ಆಗಿರುತ್ತಾನೆ.

وَمِنَ النَّاسِ وَالدَّوَآبِّ وَالْاَنْعَامِ
مُخْتَلِفٌ اَلْوَانُهٗ كَذٰلِكَ ؕ اِنَّمَا يَخْشَى
اللّٰهَ مِنْ عِبَادِهِ الْعُلَمٰٓؤُا ؕ اِنَّ اللّٰهَ
عَزِيْزٌ غَفُوْرٌ ﴿٢٨﴾

29. ಅಲ್ಲಾಹನ ಗ್ರಂಥವನ್ನು ಪಠಿಸುವವರೂ ನಮಾಝನ್ನು ಸಂಸ್ಥಾಪಿಸು ವವರೂ ನಾವು ಅವರಿಗೆ ಕೊಟ್ಟಿರುವ ಜೀವನಾಧಾರದಿಂದ ರಹಸ್ಯವಾಗಿಯೂ ಬಹಿರಂಗವಾಗಿಯೂ ಖರ್ಚು ಮಾಡುವವರೂ ನಿಶ್ಚಯವಾಗಿಯೂ ನಷ್ಟವುಂಟಾಗದಂತಹ ಒಂದು ವ್ಯಾಪಾರವನ್ನು ನಿರೀಕ್ಷಿಸುವವರಾಗಿದ್ದಾರೆ.

اِنَّ الَّذِيْنَ يَتْلُوْنَ كِتٰبَ اللّٰهِ وَاَقَامُوا
الصَّلٰوةَ وَاَنْفَقُوْا مِمَّا رَزَقْنٰهُمْ سِرًّا وَّ
عَلَانِيَةً يَّرْجُوْنَ تِجَارَةً لَّنْ تَبُوْرَ ﴿٢٩﴾

30. ಅಲ್ಲಾಹ್ ಅವರ ಸತ್ಫಲವನ್ನು ಸರ್ವಸಂಪೂರ್ಣವಾಗಿ ಅವರಿಗೆ ಕೊಡಲೆಂದು ಮತ್ತು ಅವನ ಅನುಗ್ರಹದಿಂದ ಅವರಿಗೆ ಇನ್ನಷ್ಟು ದಯಪಾಲಿಸಲೆಂದು (ಅವರು ಈ ವ್ಯಾಪಾರದಲ್ಲಿ ತಮ್ಮ ಸರ್ವಸ್ವವನ್ನು ತೊಡಗಿಸಿದ್ದಾರೆ.) ನಿಶ್ಚಯವಾಗಿಯೂ ಅಲ್ಲಾಹನು ಮಹಾಕ್ಷಮಾಶೀಲನೂ ಗುಣಗ್ರಾಹಿಯೂ ಆಗಿರುತ್ತಾನೆ.

لِيُوَفِّيَهُمْ اُجُوْرَهُمْ وَيَزِيْدَهُمْ مِّنْ
فَضْلِهٖ ؕ اِنَّهٗ غَفُوْرٌ شَكُوْرٌ ﴿٣٠﴾

2. ಜ್ಞಾನಿಯು ಪುಸ್ತಕಜ್ಞಾನವಿರುವವನು ಮಾತ್ರವಲ್ಲ, ಬದಲಾಗಿ ದೇವನನ್ನು ಭಯಪಡುವವನಾಗಿದ್ದಾನೆಂದು ಇದರಿಂದ ವ್ಯಕ್ತವಾಗುತ್ತದೆ.

31. (ಪೈಗಂಬರರೇ), ನಾವು ನಿಮ್ಮ ಕಡೆಗೆ ದಿವ್ಯವಾಣಿಯ ಮೂಲಕ ಕಳುಹಿಸಿದ ಗ್ರಂಥವೇ ಸತ್ಯವಾಗಿದ್ದು ಈ ಮುಂಚೆ ಬಂದಿದ್ದ ಗ್ರಂಥಗಳನ್ನು ದೃಢೀಕರಿಸಲು ಬಂದಿದೆ. ನಿಶ್ಚಯವಾಗಿಯೂ ಅಲ್ಲಾಹನು ತನ್ನ ದಾಸರ ಬಗ್ಗೆ ವಿವರ ಪೂರ್ಣನೂ ಪ್ರತಿಯೊಂದರ ಮೇಲೆ ನಿಗಾ ಇರಿಸುವವನೂ ಆಗಿರುತ್ತಾನೆ.

وَالَّذِىٓ اَوْحَيْنَآ اِلَيْكَ مِنَ الْكِتٰبِ
هُوَ الْحَقُّ مُصَدِّقًا لِّمَا بَيْنَ يَدَيْهِ ؕ
اِنَّ اللّٰهَ بِعِبَادِهٖ لَخَبِيْرٌۢ بَصِيْرٌ ﴿۳۱﴾

32. ಅನಂತರ ನಾವು ನಮ್ಮ ದಾಸರಲ್ಲಿ ಆಯ್ದುಕೊಂಡವರನ್ನು ಈ ಗ್ರಂಥದ ಉತ್ತರಾಧಿಕಾರಿಗಳಾಗಿ ಮಾಡಿದೆವು. ಇದೀಗ ಅವರಲ್ಲಿ ತನ್ನ ಮೇಲೆ ತಾನೇ ಅಕ್ರಮವೆಸಗಿಕೊಳ್ಳುವವನೂ ಇದ್ದಾನೆ. ಮಧ್ಯಮ ತರದವನೂ ಇದ್ದಾನೆ. ಅಲ್ಲಾಹನ ಅಪ್ಪಣೆಯಂತೆ ಪುಣ್ಯ ಕಾರ್ಯಗಳಲ್ಲಿ ಮುಂದಾಗುವವನೂ ಇದ್ದಾನೆ. ಮಹಾ ಅನುಗ್ರಹವು ಇದುವೇ ಆಗಿದೆ.

ثُمَّ اَوْرَثْنَا الْكِتٰبَ الَّذِيْنَ اصْطَفَيْنَا
مِنْ عِبَادِنَا ۚ فَمِنْهُمْ ظَالِمٌ لِّنَفْسِهٖ ۚ
وَمِنْهُمْ مُّقْتَصِدٌ ۚ وَمِنْهُمْ سَابِقٌۢ بِالْخَيْرٰتِ
بِاِذْنِ اللّٰهِ ؕ ذٰلِكَ هُوَ الْفَضْلُ الْكَبِيْرُ ﴿۳۲﴾

33. ಇವರು ಶಾಶ್ವತವಾದ ಸ್ವರ್ಗೋದ್ಯಾನಗಳಲ್ಲಿ ಪ್ರವೇಶಿಸುವವರು. ಅಲ್ಲಿ ಇವರನ್ನು ಬಂಗಾರದ ಕಂಕಣಗಳಿಂದಲೂ ಮುತ್ತುಗಳಿಂದಲೂ ಅಲಂಕರಿಸಲಾಗುವುದು. ಅಲ್ಲಿ ಅವರ ಉಡುಪು ರೇಶ್ಮೆಯದ್ದಾಗಿರುವುದು.

جَنّٰتُ عَدْنٍ يَّدْخُلُوْنَهَا يُحَلَّوْنَ فِيْهَا
مِنْ اَسَاوِرَ مِنْ ذَهَبٍ وَّلُؤْلُؤًا ۚ
وَلِبَاسُهُمْ فِيْهَا حَرِيْرٌ ﴿۳۳﴾

34. ಮತ್ತು ಅವರು, "ನಮ್ಮಿಂದ ದುಃಖವನ್ನು ದೂರೀಕರಿಸಿದ ಅಲ್ಲಾಹನಿಗೆ ಕೃತಜ್ಞತೆಗಳು. ಖಂಡಿತವಾಗಿಯೂ ನಮ್ಮ ಪ್ರಭು ಮಹಾ ಕ್ಷಮಾದಾನಿಯೂ ಗುಣಗ್ರಾಹಿಯೂ ಆಗಿರುತ್ತಾನೆ.

وَقَالُوا الْحَمْدُ لِلّٰهِ الَّذِىٓ اَذْهَبَ عَنَّا
الْحَزَنَ ؕ اِنَّ رَبَّنَا لَغَفُوْرٌ شَكُوْرُ ۙ ﴿۳۴﴾

35. ಅವನು ತನ್ನ ಅನುಗ್ರಹದಿಂದ ನಮ್ಮನ್ನು ಶಾಶ್ವತ ನಿವಾಸದಲ್ಲಿ ತಂದಿರಿಸಿದನು. ಇನ್ನು ಇಲ್ಲಿ ನಮಗೆ ಯಾವುದೇ ಸಂಕಷ್ಟವೂ ಇಲ್ಲ, ಆಯಾಸವೂ ಉಂಟಾಗುವುದಿಲ್ಲ" ಎನ್ನುವರು.

الَّذِىٓ اَحَلَّنَا دَارَ الْمُقَامَةِ مِنْ فَضْلِهٖ ۚ
لَا يَمَسُّنَا فِيْهَا نَصَبٌ وَّلَا يَمَسُّنَا
فِيْهَا لُغُوْبٌ ﴿۳۵﴾

36. ಸತ್ಯನಿಷೇಧಿಗಳಿಗಾಗಿ ನರಕಾಗ್ನಿ ಇದೆ. ಅವರಿಗೆ ಮರಣ ಕೊಟ್ಟು ಅವರನ್ನು ಮುಗಿಸಿ ಬಿಡಲಾಗುವುದೂ ಇಲ್ಲ ಮತ್ತು ಅವರ ನರಕ ಯಾತನೆಯಲ್ಲಿ ಕಡಿತ ಮಾಡಲಾಗುವುದೂ ಇಲ್ಲ. ನಾವು ಪ್ರತಿಯೊಬ್ಬ ಸತ್ಯನಿಷೇಧಿಗೂ ಇದೇ ರೀತಿ ಪ್ರತಿಫಲ ಕೊಡುತ್ತೇವೆ.

وَالَّذِيْنَ كَفَرُوْا لَهُمْ نَارُ جَهَنَّمَ ۚ لَا
يُقْضٰى عَلَيْهِمْ فَيَمُوْتُوْا وَلَا يُخَفَّفُ
عَنْهُمْ مِّنْ عَذَابِهَا ؕ كَذٰلِكَ
نَجْزِىْ كُلَّ كَفُوْرٍ ۚ ﴿۳۶﴾

37. ಅಲ್ಲಿ ಅವರು ಚೀರಾಡುತ್ತಾ, "ನಮ್ಮ ಪ್ರಭೂ, ನಾವು ಹಿಂದೆ ಮಾಡುತ್ತಿದ್ದಂತಹ ಕರ್ಮಗಳಿಗಿಂತ ಭಿನ್ನವಾದ ಸತ್ಕರ್ಮವನ್ನು ಮಾಡಲಿಕ್ಕಾಗಿ ನಮ್ಮನ್ನು ಇಲ್ಲಿಂದ ಹೊರ ತೆಗೆದುಬಿಡು" ಎನ್ನುವರು. (ಆಗ ಅವರಿಗೆ) "ಉಪದೇಶ ಪಡೆಯುವ ಇಚ್ಛೆ

وَهُمْ يَصْطَرِخُوْنَ فِيْهَا ۚ رَبَّنَآ اَخْرِجْنَا
نَعْمَلْ صَالِحًا غَيْرَ الَّذِىْ كُنَّا نَعْمَلُ ؕ
اَوَلَمْ نُعَمِّرْكُمْ مَّا يَتَذَكَّرُ فِيْهِ مَنْ

ಇರುತ್ತಿದ್ದರೆ ಉಪದೇಶ ಪಡೆಯಲು ಸಾಕಾಗುವಷ್ಟು ಆಯುಷ್ಯವನ್ನು ನಾವು ನಿಮಗೆ ಕೊಟ್ಟಿರಲಿಲ್ಲವೇ? ನಿಮ್ಮ ಬಳಿಗೆ ಎಚ್ಚರಿಕೆ ಕೊಡುವವನೂ ಬಂದಿದ್ದನು. ಈಗ ಸವಿಯಿರಿ, ಅಕ್ರಮಿಗಳಿಗೆ ಇಲ್ಲಿ ಯಾರೂ ಸಹಾಯಕನಿಲ್ಲ" (ಎಂದು ಉತ್ತರಿಸಲಾಗುವುದು).

تَذَكَّرَ وَجَآءَكُمُ النَّذِيْرُ ۖ فَذُوْقُوْا فَمَا لِلظّٰلِمِيْنَ مِنْ نَّصِيْرٍ ﴿٣٧﴾

38. ನಿಶ್ಚಯವಾಗಿಯೂ ಅಲ್ಲಾಹ್ ಭೂಮಿ-ಆಕಾಶಗಳ ಪ್ರತಿಯೊಂದು ರಹಸ್ಯವನ್ನೂ ಅರಿತಿರುತ್ತಾನೆ. ಅವನು ಹೃದಯಗಳೊಳಗೆ ಅವಿತಿರುವ ರಹಸ್ಯವನ್ನೂ ಅರಿಯುತ್ತಾನೆ.

اِنَّ اللّٰهَ عٰلِمُ غَيْبِ السَّمٰوٰتِ وَالْاَرْضِ ۗ اِنَّهٗ عَلِيْمٌۢ بِذَاتِ الصُّدُوْرِ ﴿٣٨﴾

39. ನಿಮ್ಮನ್ನು ಭೂಮಿಯಲ್ಲಿ ಪ್ರತಿನಿಧಿಗಳಾಗಿ ಮಾಡಿದವನು ಅವನೇ ತಾನೆ. ಇನ್ನೂ ಯಾರಾದರೂ ಸತ್ಯವನ್ನು ನಿಷೇಧಿಸಿದರೆ ಅವನ ನಿಷೇಧದ ಪಾತಕ ಅವನ ಮೇಲೆಯೇ ಇದೆ. ಸತ್ಯನಿಷೇಧಿಗಳಿಗೆ ಅವರ ನಿರಾಕರಣೆಯಿಂದ ಅವರ ಪ್ರಭುವಿನ ಪ್ರಕೋಪವಲ್ಲದೆ ಇನ್ನೇನೂ ವೃದ್ಧಿಸುವುದಿಲ್ಲ. ಸತ್ಯನಿಷೇಧಿಗಳಿಗೆ ಅವರ ನಿರಾಕರಣೆಯಿಂದ ಹಾನಿಯಲ್ಲೇ ಹೊರತು ಬೇರಾವುದರಲ್ಲೂ ವೃದ್ಧಿ ಉಂಟಾಗುವುದಿಲ್ಲ.

هُوَ الَّذِيْ جَعَلَكُمْ خَلٰٓئِفَ فِي الْاَرْضِ ۗ فَمَنْ كَفَرَ فَعَلَيْهِ كُفْرُهٗ ۗ وَلَا يَزِيْدُ الْكٰفِرِيْنَ كُفْرُهُمْ عِنْدَ رَبِّهِمْ اِلَّا مَقْتًا ۚ وَلَا يَزِيْدُ الْكٰفِرِيْنَ كُفْرُهُمْ اِلَّا خَسَارًا ﴿٣٩﴾

40. (ಪೈಗಂಬರರೇ), ಇವರೊಡನೆ ಹೇಳಿರಿ- "ನೀವು ಅಲ್ಲಾಹನನ್ನು ಬಿಟ್ಟು ಪ್ರಾರ್ಥಿಸುತ್ತಿರುವ ನಿಮ್ಮ ಸಹಭಾಗಿಗಳನ್ನು ಎಂದಾದರೂ ಕಂಡಿದ್ದೀರಾ? ಅವರು ಭೂಮಿಯಲ್ಲಿ ಏನನ್ನು ಸೃಷ್ಟಿಸಿದ್ದಾರೆ? ಅಥವಾ ಆಕಾಶಗಳಲ್ಲಿ ಅವರ ಪಾಲು ಏನಿದೆಯೆಂಬುದನ್ನು ನನಗೆ ತೋರಿಸಿರಿ" (ಇದನ್ನು ಇವರು ತೋರಿಸಲಾರರೆಂದಾದರೆ ಇವರೊಡನೆ ಕೇಳಿರಿ). ನಾವು ಅವರಿಗೆ ಯಾವುದೇ ದಾಖಲೆಯನ್ನು ಬರೆದು ಕೊಟ್ಟಿದ್ದು ಅದರ ಆಧಾರದಲ್ಲಿ ಅವರು (ತಮ್ಮ ಬಹುದೇವ ವಾದಕ್ಕೆ) ಸುಸ್ಪಷ್ಟ ಪುರಾವೆಯನ್ನು ಹೊಂದಿದ್ದಾರೆಯೇ? ಇಲ್ಲ, ವಾಸ್ತವದಲ್ಲಿ ಈ ಅಕ್ರಮಿಗಳು ಪರಸ್ಪರ ಮೋಸದ ಭರವಸೆಗಳನ್ನು ಮಾತ್ರ ನೀಡುತ್ತಲಿದ್ದಾರೆ.

قُلْ اَرَءَيْتُمْ شُرَكَآءَكُمُ الَّذِيْنَ تَدْعُوْنَ مِنْ دُوْنِ اللّٰهِ ۗ اَرُوْنِيْ مَاذَا خَلَقُوْا مِنَ الْاَرْضِ اَمْ لَهُمْ شِرْكٌ فِي السَّمٰوٰتِ ۚ اَمْ اٰتَيْنٰهُمْ كِتٰبًا فَهُمْ عَلٰى بَيِّنَتٍ مِّنْهُ ۚ بَلْ اِنْ يَّعِدُ الظّٰلِمُوْنَ بَعْضُهُمْ بَعْضًا اِلَّا غُرُوْرًا ﴿٤٠﴾

41. ವಾಸ್ತವದಲ್ಲಿ ಭೂಮಿ-ಆಕಾಶಗಳು ಸರಿದು ಹೋಗದಂತೆ ತಡೆದಿಟ್ಟಿರುವವನು ಅಲ್ಲಾಹನೇ. ಅವು ಸರಿದು ಹೋದರೆ, ಅಲ್ಲಾಹನ ಹೊರತು ಅವುಗಳನ್ನಾಧರಿಸುವವನು ಬೇರಾರೂ ಇಲ್ಲ. ನಿಶ್ಚಯವಾಗಿಯೂ ಅಲ್ಲಾಹನು ಅತ್ಯಂತ ಸಹನಶೀಲನೂ ಕ್ಷಮಾಶೀಲನೂ ಆಗಿರುತ್ತಾನೆ.

اِنَّ اللّٰهَ يُمْسِكُ السَّمٰوٰتِ وَالْاَرْضَ اَنْ تَزُوْلَا ۚ وَلَئِنْ زَالَتَآ اِنْ اَمْسَكَهُمَا مِنْ اَحَدٍ مِّنْۢ بَعْدِهٖ ۗ اِنَّهٗ كَانَ حَلِيْمًا غَفُوْرًا ﴿٤١﴾

42. ಓರ್ವ ಎಚ್ಚರಿಕೆ ಕೊಡುವವನು ಇವರ ಬಳಿಗೆ ಬಂದು ಬಿಡುತ್ತಿದ್ದರೆ

وَاَقْسَمُوْا بِاللّٰهِ جَهْدَ اَيْمَانِهِمْ لَئِنْ

ಇವರು ಜಗತ್ತಿನ ಇತರೆಲ್ಲ ಜನಾಂಗಗಳಿಗಿಂತ ಹೆಚ್ಚು ಸನ್ಮಾರ್ಗ ಗಾಮಿಗಳಾಗುತ್ತಿದ್ದರೆಂದು ಇವರು ದೃಢವಾಗಿ ಅಲ್ಲಾಹನ ಆಣೆ ಹಾಕುತ್ತಾ ಹೇಳುತ್ತಿದ್ದರು. ಆದರೆ, ಎಚ್ಚರಿಕೆ ಕೊಡುವವನು ಇವರ ಬಳಿಗೆ ಬಂದಾಗ ಅವನ ಆಗಮನವು ಇವರಲ್ಲಿ ಸತ್ಯದ ಬಗ್ಗೆ ದ್ವೇಷದ ಹೊರತು ಇನ್ನಾವುದನ್ನೂ ವೃದ್ಧಿಸಲಿಲ್ಲ.

جَآءَهُمْ نَذِيرٌ لَّيَكُونُنَّ أَهْدَىٰ مِنْ
إِحْدَى ٱلْأُمَمِ ۖ فَلَمَّا جَآءَهُمْ نَذِيرٌ
مَّا زَادَهُمْ إِلَّا نُفُورًا ﴿٤٢﴾

43. ಇವರು ಭೂಮಿಯಲ್ಲಿ ಇನ್ನಷ್ಟು ಹೆಚ್ಚು ಅತಿಕ್ರಮವೆಸಗತೊಡಗಿದರು ಮತ್ತು ಕುತಂತ್ರಗಳನ್ನು ಹೂಡತೊಡಗಿದರು. ವಸ್ತುತಃ ಕುತಂತ್ರಗಳು ಅವುಗಳನ್ನು ಹೂಡುವವರನ್ನೇ ಅಧೋಗತಿಗೆ ಇಳಿಸಿ ಬಿಡುತ್ತವೆ. ಇನ್ನು, ಗತ ಜನಾಂಗಗಳೊಂದಿಗೆ ಅಲ್ಲಾಹನು ತೋರಿದ ಕಾರ್ಯನೀತಿ ಇವರೊಂದಿಗೂ ತೋರಬೇಕೆಂದು ಇವರು ನಿರೀಕ್ಷಿಸುತ್ತಿರುವರೇ? ಹಾಗಿದ್ದರೆ ನೀವು ಅಲ್ಲಾಹನ ಕಾರ್ಯನೀತಿಯಲ್ಲಿ ಯಾವುದೇ ಬದಲಾವಣೆಯನ್ನು ಕಾಣಲಾರಿರಿ ಮತ್ತು ಯಾವುದೇ ಶಕ್ತಿಯು ಅಲ್ಲಾಹನ ಕಾರ್ಯನೀತಿಯನ್ನು ಅದರ ನಿಶ್ಚಿತ ಪಥದಿಂದ ಬದಲಾಯಿಸಬಲ್ಲುದೆಂಬುದನ್ನು ನೀವು ಕಾಣಲಾರಿರಿ.

ٱسْتِكْبَارًا فِى ٱلْأَرْضِ وَمَكْرَ ٱلسَّيِّئِ ۚ
وَلَا يَحِيقُ ٱلْمَكْرُ ٱلسَّيِّئُ إِلَّا بِأَهْلِهِۦ ۚ
فَهَلْ يَنظُرُونَ إِلَّا سُنَّتَ ٱلْأَوَّلِينَ ۚ
فَلَن تَجِدَ لِسُنَّتِ ٱللَّهِ تَبْدِيلًا ۖ
وَلَن تَجِدَ لِسُنَّتِ ٱللَّهِ تَحْوِيلًا ﴿٤٣﴾

44. ಇವರಿಗಿಂತ ಮುಂಚೆ ಗತಿಸಿದವರ ಪರಿಣಾಮವೇನಾಯಿತೆಂದು ಕಂಡುಕೊಳ್ಳಲು ಇವರು ಭೂಮಿಯ ಮೇಲೆಂದೂ ಸಂಚರಿಸಲಿಲ್ಲವೇ? ಅವರು ಇವರಿಗಿಂತ ಅಧಿಕ ಬಲಶಾಲಿಗಳಾಗಿದ್ದರು. ಆಕಾಶಗಳಲ್ಲಾಗಲಿ, ಭೂಮಿಯಲ್ಲಾಗಲಿ ಅಲ್ಲಾಹನನ್ನು ಸೋಲಿಸಬಲ್ಲ ಯಾವ ಶಕ್ತಿಯೂ ಇಲ್ಲ. ಅವನು ಸರ್ವವನ್ನೂ ಬಲ್ಲವನು ಮತ್ತು ಸರ್ವಶಕ್ತನು.

أَوَلَمْ يَسِيرُوا۟ فِى ٱلْأَرْضِ فَيَنظُرُوا۟
كَيْفَ كَانَ عَٰقِبَةُ ٱلَّذِينَ مِن قَبْلِهِمْ
وَكَانُوٓا۟ أَشَدَّ مِنْهُمْ قُوَّةً ۚ وَمَا كَانَ
ٱللَّهُ لِيُعْجِزَهُۥ مِن شَىْءٍ فِى ٱلسَّمَٰوَٰتِ
وَلَا فِى ٱلْأَرْضِ ۚ إِنَّهُۥ كَانَ عَلِيمًا قَدِيرًا ﴿٤٤﴾

45. ಅವನು ಜನರನ್ನು ಅವರು ಮಾಡಿದ ದುಷ್ಕರ್ಮಗಳಿಗಾಗಿ ಹಿಡಿಯುತ್ತಿದ್ದರೆ, ಭೂಮಿಯ ಮೇಲೆ ಒಂದು ಜೀವಿಯನ್ನೂ ಜೀವಂತ ಬಿಡುತ್ತಿರಲಿಲ್ಲ. ಆದರೆ, ಅವನು ಅವರಿಗೆ ಒಂದು ನಿಶ್ಚಿತ ಸಮಯದ ವರೆಗೆ ಕಾಲಾವಕಾಶ ಕೊಡುತ್ತಿದ್ದಾನೆ. ಅನಂತರ ಅವರ ನಿಶ್ಚಿತ ಕಾಲ ಬಂದಾಗ ಅಲ್ಲಾಹನು ತನ್ನ ದಾಸರನ್ನು ನೋಡಿಕೊಳ್ಳುವನು.

وَلَوْ يُؤَاخِذُ ٱللَّهُ ٱلنَّاسَ بِمَا كَسَبُوا۟
مَا تَرَكَ عَلَىٰ ظَهْرِهَا مِن دَآبَّةٍ وَلَٰكِن
يُؤَخِّرُهُمْ إِلَىٰٓ أَجَلٍ مُّسَمًّى ۖ فَإِذَا جَآءَ
أَجَلُهُمْ فَإِنَّ ٱللَّهَ كَانَ بِعِبَادِهِۦ بَصِيرًۢا ﴿٤٥﴾